# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಭುವನೇಶ್ವರ ತಂದೆ ಹಿರೇ ಹನುಮಂತಪ್ಪ, ಅಧ್ಯಕ್ಷರು, ವೆಂಕಟಗಿರಿ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ, ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ಮತ್ತು 48(4) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

ಓದಲಾಗಿದೆ:

1. ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ ಇವರ ಪತ್ರ ಸಂಖ್ಯೆ: ಜಿಪಂಕೊ/ಉಖಾಯೋ/ ಶಿಕ್ರ/ಸಿಸಿಎ/2017-18/1927 ದಿನಾಂಕ:30.08.2017
2. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಗಂಗಾವತಿ ಇವರ ಪತ್ರ ಸಂಖ್ಯೆ: ತಾಪಂಗಂ/ವಸತಿ/2017-18/953 ದಿನಾಂಕ:04.09.2017
3. ಸರ್ಕಾರದ ಪತ್ರ ಸಂಖ್ಯೆ: ಸಂ.ಗ್ರಾಅಪ:1053:ಗ್ರಾಪಂಅ:2017 ದಿನಾಂಕ:22.09.2017 ರ ಕಾರಣ ಕೇಳುವ ನೋಟಿಸ್ಸು.
4. ಶ್ರೀ ಭುವನೇಶ್ವರ ತಂದೆ ಹಿರೇ ಹನುಮಂತಪ್ಪ, ಅಧ್ಯಕ್ಷರು, ವೆಂಕಟಗಿರಿ ಗ್ರಾಮ ಪಂಚಾಯಿತಿ, ಇವರು ಕಾರಣ ಕೇಳುವ ನೋಟಿಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ: 25.10.2017.
5. ವಿಚಾರಣೆಗೆ ಹಾಜರಾಗುವ ತಿಳುವಳಿಕೆ ಪತ್ರ ದಿನಾಂಕ:10.11.2017.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಕೊಪ್ಪಳ ರವರು, ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯಿತಿ ಗಂಗಾವತಿರವರಿಗೆ ಬರೆದ ಪತ್ರದಲ್ಲಿ, ಉದ್ಯೋಗ ಖಾತರಿ ಯೋಜನೆಯಡಿ ವೆಂಕಟಗಿರಿ ಗ್ರಾಮ ಪಂಚಾಯಿತಿಯಲ್ಲಿ ಅವ್ಯವಹಾರ ನಡೆದಿದೆ ಎನ್ನಲಾದ ದೂರನ್ನು ಆಧರಿಸಿ 2014-15 ರಿಂದ 2016-17 ನೇ ಸಾಲಿನ ಅವಧಿಗೆ ಕೈಗೊಂಡ ವಿಶೇಷ ತನಿಖಾ ವರದಿಯಂತೆ ಆಪಾದಿತ ಅಧಿಕಾರಿಗಳು ಗ್ರಾಮ ಪಂಚಾಯಿತಿ ಅಧ್ಯಕ್ಷರು ಇವರ ವಿರುದ್ಧ ಶಿಸ್ತು ಕ್ರಮ ವಹಿಸುವ ಬಗ್ಗೆ ಈ ಕೆಳಕಂಡಂತೆ ತಿಳಿಸಿರುತ್ತಾರೆ.

ವಿಶೇಷ ತನಿಖಾ ವರದಿಯಂತೆ ವೆಂಕಟಗಿರಿ ಗ್ರಾಮ ಪಂಚಾಯತ್ ವ್ಯಾಪ್ತಿಯ 8 ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಪ್ರಯೋಜನಕ್ಕೆ ಬಾರದ ಕೆಲಸಗಳನ್ನು ನಿರ್ವಹಿಸಿರುವುದು, ದಾಖಲೆಗಳು ಒಂದಕ್ಕೊಂದು ತಾಳೆ ಹೊಂದಿಲ್ಲದಿರುವುದು, ವ್ಯತಿರಿಕ್ತ ಅಂಶಗಳು ಗಮನಿಸಲಾಗಿದ್ದು ಅನಗತ್ಯ ಹೊರೆಯಿಂದ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಿರುವುದೆಂದು ವರದಿಸಿರುತ್ತಾರೆ. ಅಲ್ಲದೇ ಅಪ್ರಾಪ್ತ ಶಾಲಾ ಬಾಲಕ, ಬಾಲಕಿಯರಿಗೆ, ಮದುವೆಯಾದ ಗಂಡನ ಮನೆಗೆ ಹೋದವರಿಗೆ ಹಾಗೂ ಮರಣ ಹೊಂದಿದವರಿಗೆ ನರೇಗಾ ಯೋಜನೆಯಡಿ 10 ಕಾಮಗಾರಿಗಳಿಗೆ ಕೂಲಿ ಪಾವತಿ ಮಾಡಿರುವುದು ಕಂಡುಬಂದಿದ್ದು ಸರ್ಕಾರದ ನಿಯಮಗಳನ್ನು ಆದೇಶಗಳನ್ನು ಪಾಲಿಸದೇ ಅಧಿಕಾರಿಗಳು ಮನಬಂದಂತೆ ವರ್ತಿಸಿರುವುದು ಕಡತಗಳನ್ನು ಪರಿಶೀಲಿಸಿದಾಗ ಕಂಡುಬಂದಿರುತ್ತದೆಂದು ವರದಿಸಿರುತ್ತಾರೆ. ಈ ಪ್ರಕರಣದ ಆಪಾದಿತರಲ್ಲಿ ಕ್ರಿಮಿನಲ್ ಮೊಕದಮ್ಮೆ ದಾಖಲಿಸಲು ಬಾಕಿ ಇರುವ ಭುವನೇಶಪ್ಪ, ಸದರಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಹಾಗೂ ದೊಡ್ಡಬಸಮ್ಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರವರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಲು ತಿಳಿಸಿ ಈ ಪ್ರಕರಣಕ್ಕೆ ಬಾಕಿ ಇರುವ ದೋಷಾರೋಪಣ ಪತ್ರಗಳನ್ನು ಕಳುಹಿಸಿಕೊಡುವಂತೆ ಹಾಗೂ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ಮತ್ತು 48(4) ರಡಿ ಈ ಮೇಲಿನ ಗ್ರಾಮ ಪಂಚಾಯಿತಿ ಅಧ್ಯಕ್ಷರ ಸದಸ್ಯತ್ವವನ್ನು ರದ್ದು ಪಡಿಸುವ ಪ್ರಸ್ತಾವನೆಯನ್ನು ಕೂಡಲೇ ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ರವರು ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಕೊಪ್ಪಳ ರವರ ಆದೇಶದಂತೆ ವೆಂಕಟಗಿರಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀ ಭುವನೇಶ್ವರ ತಂದೆ ಹಿರೇ ಹನುಮಂತಪ್ಪ ಸಾ:ಉಡಮಕಲ್ ಇವರ ವಿರುದ್ಧ ಗಂಗಾವತಿಯ ಗ್ರಾಮೀಣಾ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ:266/2017 ದಿನಾಂಕ:31.08.2017 ರಂದು ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿರುತ್ತದೆಂದು, ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ:271:ಗ್ರಾಪಂಅ:2007 ದಿನಾಂಕ:08.05.2007 ರ ನಿರೂಪಣೆಯಂತೆ ಗ್ರಾಮ ಪಂಚಾಯಿತಿಗಳಲ್ಲಿ

ಹಣ ದುರುಪಯೋಗ ಪ್ರಕರಣಗಳ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳಲು ಸಂಬಂಧಿಸಿದ ಕಾರ್ಯನಿರ್ವಾಹಕ ಅಧಿಕಾರಿಗೆ ಅಧಿಕಾರ ನೀಡಲಾಗಿದ್ದು, ಅದರಂತೆ ಸದರಿ ಅಧ್ಯಕ್ಷರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿರುತ್ತದೆಂದು ತಿಳಿಸಿರುತ್ತಾರೆ.

ಶ್ರೀ ಭುವನೇಶ್ವರ ತಂದೆ ಹಿರೇ ಹನುಮಂತಪ್ಪ, ಅಧ್ಯಕ್ಷರು, ವೆಂಕಟಗಿರಿ ಗ್ರಾಮ ಪಂಚಾಯಿತಿ, ರವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿರುವುದರಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ಮತ್ತು 48(4) ರಡಿ ಶಿಸ್ತು ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಪೂರಕ ದಾಖಲಾತಿಗಳೊಂದಿಗೆ ವರದಿಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43-ಎ ರ ಅಡಿ ಕ್ರಮ ವಹಿಸುವ ಪೂರ್ವದಲ್ಲಿ ನಿಯಮಾನುಸಾರ ಕಾರಣ ಕೇಳುವ ನೋಟಿಸ್ಸನ್ನು ದಿನಾಂಕ: 22.09.2017 ರಂದು ಜಾರಿ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (4) ರಲ್ಲಿ ಸದರಿಯವರು ದಿನಾಂಕ:25.10.2017 ರಂದು ಕಾರಣ ಕೇಳುವ ನೋಟಿಸ್ಸಿಗೆ ಈ ಕೆಳಕಂಡಂತೆ ಉತ್ತರ ಸಲ್ಲಿಸಿರುತ್ತಾರೆ.

ಸದರಿಯವರು ತಮ್ಮ ಲಿಖಿತ ಹೇಳಿಕೆಯಲ್ಲಿ ವೆಂಕಟಗಿರಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಜೂನ್ 2015 ರಿಂದ ಕರ್ತವ್ಯ ನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತಾರೆ. ಸದರಿ ಪ್ರಕರಣಕ್ಕೆ ಸಂಬಂಧಪಟ್ಟ ವಿಶೇಷ ತನಿಖಾ ತಂಡದ ವರದಿಯಲ್ಲಿರುವಂತೆ

1. ಉಡಮಕಲ್ ಗ್ರಾಮದ ಡಿ.ಮಲ್ಲಾಪೂರ ಜಿನುಗು ಕೆರೆಯನ್ನು ಅಭಿವೃದ್ಧಿ ಪಡಿಸುವುದು 2014-15 ನೇ ಸಾಲಿನ ಕಾಮಗಾರಿ ಅಂದಾಜು ಮೊತ್ತ-10 ಲಕ್ಷ.
2. ಉಡಮಕಲ್ ಗ್ರಾಮದ ಮಠದಿಂದ ನಾಲದವರೆಗೆ ಚರಂಡಿ ನಿರ್ಮಾಣ, 2015-16 ನೇ ಸಾಲಿನ ಕಾಮಗಾರಿ ಅಂದಾಜು ಮೊತ್ತ-3 ಲಕ್ಷ.
3. ಉಡಮಕಲ್ ಗ್ರಾಮದಲ್ಲಿ ಮುದುಕಪ್ಪ ಮನೆಯಿಂದ ಹಳ್ಳದವರೆಗೆ ಚರಂಡಿ ನಿರ್ಮಾಣ 2015-16 ನೇ ಸಾಲಿನ ಕಾಮಗಾರಿ ಅಂದಾಜು ಮೊತ್ತ-3 ಲಕ್ಷ.
4. ಬಂಡ್ರಾಳ ಗ್ರಾಮದ ವಿರುಪಣ್ಣನ ಮನೆಯಿಂದ ನನ್ನೆಸಾಬ ಮನೆಯವರೆಗೆ ಚರಂಡಿ ನಿರ್ಮಾಣ 2015-16 ನೇ ಸಾಲಿನ ಕಾಮಗಾರಿ ಅಂದಾಜು ಮೊತ್ತ-3 ಲಕ್ಷ.
5. ವೆಂಕಟಗಿರಿ ಗ್ರಾಮದ ಸಣ್ಣೆಪ್ಪನ ಮನೆಯಿಂದ ಸಣ್ಣ ಬಾಷಾಸಾಬ್ ಮನೆಯವರೆಗೆ ಚರಂಡಿ ನಿರ್ಮಾಣ 2016-17 ನೇ ಸಾಲಿನ ಕಾಮಗಾರಿ ಅಂದಾಜು ಮೊತ್ತ-5 ಲಕ್ಷ.
6. ವೆಂಕಟಗಿರಿ ಗ್ರಾಮದ ಸರ್ಕಾರಿ ಆಸ್ಪತ್ರೆಯಿಂದ ಬಾಯಿನಾಲದವರೆಗೆ ಚರಂಡಿ ನಿರ್ಮಾಣ 2016-17 ನೇ ಸಾಲಿನ ಕಾಮಗಾರಿ ಅಂದಾಜು ಮೊತ್ತ-3 ಲಕ್ಷ.

ಈ ಮೇಲ್ಕಂಡ ಕಾಮಗಾರಿಗಳಲ್ಲಿ 2014-15 ನೇ ಸಾಲಿನಲ್ಲಿ ನಡೆದ ಕಾಮಗಾರಿಯ ಸಮಯದಲ್ಲಿ ಸದರಿಯವರು ಅಧ್ಯಕ್ಷರಾಗಿರುವುದಿಲ್ಲವೆಂದು, ನಂತರದ ಕಾಮಗಾರಿಗಳಲ್ಲಿ ಆಗಿರುವ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ತಾಂತ್ರಿಕ ಸಹಾಯಕರು, ಕಂಪ್ಯೂಟರ್ ಆಪರೇಟರ್ ಜವಾಬ್ದಾರರಾಗಿದ್ದು ಇದರಲ್ಲಿ ಸದರಿಯವರ ಪಾತ್ರವಿರುವುದಿಲ್ಲವೆಂದು ತಿಳಿಸಿರುತ್ತಾರೆ. ವಿಶೇಷ ತನಿಖಾ ತಂಡದ ವರದಿಯಲ್ಲಿ ಕೆಲಸಕ್ಕೆ ಬಾರದ ಕೆಲಸಗಳನ್ನು ನಿರ್ವಹಿಸಿರುವುದಾಗಿ ತಿಳಿಸಿದ್ದು ಸದರಿ ಕಾಮಗಾರಿಗಳನ್ನು ಎಲ್ಲಾ ಸದಸ್ಯರ ಹಾಗೂ ಅಧಿಕಾರಿಗಳ ಅಭಿಪ್ರಾಯದಂತೆ ಚರ್ಚಿಸಿ ಮೇಲ್ಕಂಡ ಕಾಮಗಾರಿಗಳನ್ನು ಆಯ್ಕೆ ಮಾಡಿ ನಿರ್ವಹಿಸಿದ್ದಾಗಿ, ಇದರಲ್ಲಿ ಸದರಿಯವರು ಒಬ್ಬರೇ ಜವಾಬ್ದಾರಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಎಂ.ಬಿ ಪುಸ್ತಕದ ನಿರ್ವಾಹಣೆ, ಕಾಮಗಾರಿಗಳಿಗೆ ಸಂಬಂಧಪಟ್ಟ ಇತರ ದಾಖಲೆಗಳನ್ನು ನಿರ್ವಹಿಸದೆ ಇರುವುದು ಅಪ್ರಾಪ್ತ ಶಾಲಾ ಬಾಲಕ-ಬಾಲಕಿಯರಿಗೆ ಮದುವೆಯಾಗಿ ಗಂಡನ ಮನೆಗೆ ಹೋದ ಹೆಣ್ಣು ಮಕ್ಕಳಿಗೆ ಹಾಗೂ ಮರಣ ಹೊಂದಿದವರ ಹೆಸರಿಗೆ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯ ಕೂಲಿ ಹಣವನ್ನು ಪಾವತಿಸುವ ವಿಚಾರ ಅಧಿಕಾರಿ ವರ್ಗದವರಾದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ತಾಂತ್ರಿಕ ಸಹಾಯಕರು, ಕಂಪ್ಯೂಟರ್ ಆಪರೇಟರ್ ಹಾಗೂ ಇನ್ನಿತರರ ಅಧಿಕಾರಿ ವರ್ಗದವರಾಗಿದ್ದು, ತಾವು ಹೊಣೆಗಾರರಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (5) ರಲ್ಲಿ ಸದರಿ ಆಪಾದಿತರಿಗೆ ವಿಚಾರಣೆಗೆ ಹಾಜರಾಗಲು ತಿಳುವಳಿಕೆ ಪತ್ರವನ್ನು ಹೊರಡಿಸಲಾಗಿದ್ದು, ಮಾನ್ಯ ಪ್ರಧಾನ ಕಾರ್ಯದರ್ಶಿಯವರ ನ್ಯಾಯಾಲಯದ ವಿಚಾರಣೆಗೆ ದಿನಾಂಕ:27.11.2017 ರಂದು ಸದರಿಯವರು ಹಾಜರಿರುತ್ತಾರೆ ಹಾಗೂ ತಮ್ಮ ಹೇಳಿಕೆಯನ್ನು ತಿಳಿಸಿರುತ್ತಾರೆ.

ಮಾನ್ಯ ಪ್ರಧಾನ ಕಾರ್ಯದರ್ಶಿಯವರ ನ್ಯಾಯಾಲಯದಲ್ಲಿ ದಿನಾಂಕ:30.11.2017 ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರ ಪತ್ರ, ಕಾರ್ಯನಿರ್ವಾಹಕ ಅಧಿಕಾರಿರವರ ವರದಿ ಹಾಗೂ ಸದರಿಯವರು ನೀಡಿರುವ ಲಿಖಿತ ಹೇಳಿಕೆ ಹಾಗೂ ಈ ಪ್ರಕರಣದಲ್ಲಿ ಲಭ್ಯವಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಈ ಪ್ರಕರಣದಲ್ಲಿನ ವಾಸ್ತವಾಂಶಗಳನ್ನು ಮನದಟ್ಟು ಮಾಡಿಕೊಂಡು ಶ್ರೀ ಭುವನೇಶ್ವರ ತಂದೆ ಹಿರೇ ಹನುಮಂತಪ್ಪ, ಅಧ್ಯಕ್ಷರು, ವೆಂಕಟಗಿರಿ ಗ್ರಾಮ ಪಂಚಾಯಿತಿರವರು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಕಾಮಗಾರಿಗಳನ್ನು ಪರಿಶೀಲನೆ ಮಾಡದೆ ಹಣ ಪಾವತಿಸಿ ಅವ್ಯವಹಾರಕ್ಕೆ ಕಾರಣರಾಗಿರುವ ಹಿನ್ನಲೆಯಲ್ಲಿ ಕರ್ತವ್ಯಲೋಪ ಎಸಗಿರುವುದು ರುಜುವಾತಾಗಿರುವುದರಿಂದ ಸರ್ಕಾರವು ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43(ಎ) ಮತ್ತು 48(4) ರನ್ವಯ ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನ ಹಾಗೂ ಸದಸ್ಯತ್ವ ಎರಡನ್ನೂ ತೆಗೆದು ಹಾಕಲು ನಿರ್ಣಯಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/1053/ಗ್ರಾಪಂಅ/2017**
**ಬೆಂಗಳೂರು, ದಿನಾಂಕ:-28-03-2018.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಭುವನೇಶ್ವರ ತಂದೆ ಹಿರೇ ಹನುಮಂತಪ್ಪ, ಅಧ್ಯಕ್ಷರು, ವೆಂಕಟಗಿರಿ ಗ್ರಾಮ ಪಂಚಾಯಿತಿರವರು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಕಾಮಗಾರಿಗಳನ್ನು ಪರಿಶೀಲನೆ ಮಾಡದೆ ಹಣ ಪಾವತಿಸಿ ಅವ್ಯವಹಾರಕ್ಕೆ ಕಾರಣರಾಗಿರುವ ಹಿನ್ನಲೆಯಲ್ಲಿ ಕರ್ತವ್ಯಲೋಪ ಎಸಗಿರುವುದು ರುಜುವಾತಾಗಿರುವುದರಿಂದ ಸರ್ಕಾರವು ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43(ಎ) ಮತ್ತು 48(4) ರನ್ವಯ ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನ ಹಾಗೂ ಸದಸ್ಯತ್ವ ಎರಡನ್ನೂ ತೆಗೆದು ಹಾಕಿ ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿದೆ.

(ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಅಪ ಇಲಾಖೆ ರವರಿಂದ ಅನುಮೋದಿತ)

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ,**

1. ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕೊಪ್ಪಳ ಜಿಲ್ಲೆ.
2. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ.
3. ಶ್ರೀ ಭುವನೇಶ್ವರ ತಂದೆ ಹಿರೇ ಹನುಮಂತಪ್ಪ, ಅಧ್ಯಕ್ಷರು, ವೆಂಕಟಗಿರಿ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ.

4. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ವೆಂಕಟಗಿರಿ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
6. ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.